International Journal of Kannada Research
www.kannadajournal.com

**ISSN: 2454–5813**
IJKR 2018; 4(3): 217-219
© 2018 IJKR
www.kannadajournal.com
Received: 07-05-2018
Accepted: 08-06-2018

**ವಿಜಯಕುಮಾರ ಬಿ. ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

**Correspondence**
**ವಿಜಯಕುಮಾರ ಬಿ. ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

# ಸತ್ಯ ನಿಷ್ಠೆಯ ಸಂತ: ಶ್ರೀ ಬೆಲ್ದಾಳ ಶರಣರು

**ವಿಜಯಕುಮಾರ ಬಿ. ಬೀಳಗಿ**

**ಪೀಠಿಕೆ**

ವಚನ ಮತ್ತು ವಚನಕಾರರಿಗೆ ಅವಿನಾಭಾವ ಸಂಬಂಧ ಇದೆ. ೧೨ನೇ ಶತಮಾನವು ಪ್ರಪಂಚದ ಮೊದಲ ಸಾರ್ವತ್ರಿಕ ಸಂಸತ್ತು ಎಂದು ಈಗಾಗಲೇ ಪ್ರಸಿದ್ಧಿ ಪಡೆದಿದೆ. ಆದರೆ ವಚನಕಾರಗಿಂತಲೂ ಮುಂಚೆ ತಥಾಗತ ಗೌತಮ ಬುದ್ಧ ಬಡವರ ಪರವಾಗಿ ದೀನ–ದಲಿತರ ಪರವಾಗಿ ಮತ್ತು ಅಸಾಯಕರ ಪರವಾಗಿ ನಿಂತಿದ್ದಾರೆ. ಇದಲ್ಲದೇ ಪ್ರಾಣಿ ಪಕ್ಷಿ ಮರ–ಗಿಡ ಬಳ್ಳಿ ಹಾಗೂ ನಿಸರ್ಗವನ್ನು ಆರಾಧಿಸುತ್ತ ಬೆಳೆದ ಮಹಾಪುರುಷರಾಗಿದ್ದಾರೆ. ಇವರ ನಂತರದ ೨ನೇ ಸಮಾತನೆಯ ಹಂತವೇ ಅದು ೧೨ನೇ ಶತಮಾನವಾಗಿದೆ. ಇಲ್ಲಿ ಬರುವ ಶರಣರು ಇಡೀ ಬ್ರಹ್ಮಾಂಡವನ್ನೇ ಆರಾಧಿಸುತ್ತ ಮತ್ತು ಸುಖಿಯಾಗಿರುವ ಕಲ್ಪನೆಗೆ ಭದ್ರವಾದ ಒಂದು ವೇದಿಕೆಯೇ ಸಿದ್ಧ ಮಾಡಿದ್ದಾರೆ. ಗಂಡು–ಹೆಣ್ಣು ಎಂಬ ಭೇದವಿಲ್ಲದೆ, ಅಸ್ಪೃಶ್ಯತೆ ಆಚರಿಸದೆ, ಮೇಲು–ಕೀಳೆಂಬ ಅಸಮಾನತೆಯನ್ನು ತೋರದೆ ಸರಳ ಸಜ್ಜನಿಕೆಯ ಬದುಕಿಗೆ ನಾಂದಿ ಹಾಡಿದ್ದಾರೆ.

'ಶರಣರಿಗೆ ಸಮ ಮತ್ತಾರಿಲ್ಲ ಶರಣರಿಗೆ ಶರಣರೆ ಸಮ'ವಾಗಿದ್ದಾರೆ. ದೈವ ಕಲ್ಪನೆಯೂ ಇಲ್ಲಿ ಗೌಣವಾಗಿ, ಮನುಷ್ಯರಲ್ಲಿಯೇ ದೈವತ್ವ ಮತ್ತು ಭಕ್ತಿ ಭಾವವನ್ನು ಕಂಡು ಎಲ್ಲವರ್ಗಗಳ ಕುಲಕಸುಬುಗಳನ್ನು ಆರಾಧಿಸುವ ಕಾಯಕವಾಗಿದೆ. ವಿನಃ ಅದು ಜಾತಿಯಲ್ಲ ಎಂದು ಪ್ರಪಂಚಕ್ಕೆ ಸಾರಿದ್ದಾರೆ. ಇಂತಹ ಸರಳ ಸಜ್ಜನಿಕೆಯ ಸತ್ಯ ಶರಣರ ಪರಂಪರೆಯನ್ನು ನಿರ್ಮಲ ಮನಸ್ಸಿನಿಂದ ಸಾಧು, ಸಂತರು, ದಾಸರು ಮತ್ತು ಅವಧೂತರು ಮುಂತಾದವರು ಮಾನವೀಯ ತತ್ವಗಳನ್ನು ಅಳವಡಿಸಿಕೊಂಡು ಬಂದಿದ್ದಾರೆ.

ಆಧುನಿಕ ಯುಗದಲ್ಲಿ ದಲಿತ ಶರಣರಾದ ಶ್ರೀ ಸಿದ್ಧರಾಮ ಬೆಲ್ದಾಳ ಶರಣರು ಒಬ್ಬರಾಗಿದ್ದಾರೆ. ಬೀದರ ಜಿಲ್ಲೆಯ ಔರಾದ ತಾಲೂಕಿನ ಬೆಲ್ದಾಳ ಒಂದು ಚಿಕ್ಕ ಕುಗ್ರಾಮ. ಈ ದಲಿತ ಬಡಕುಟುಂಬದಲ್ಲಿ ತಂದೆ ಲಾಲಪ್ಪ ಮತ್ತು ತಾಯಿ ಲಕ್ಷ್ಮೀದೇವಿಯವರ ಪ್ರೀತಿಯ ಮಗುವಾಗಿ ೧೯೪೮ ಫೆಭ್ರುವರಿ ಮಾಘಮಾಸವಾದ ಶಿವರಾತ್ರಿಯೆಂದು ಶಿವಭಕ್ತ ಕುಟುಂಬದಲ್ಲಿ ಜನಿಸಿದರು. ಇವರ ಮೊದಲ ಹೆಸರು ಪ್ರೀತಿಯಿಂದ ವಿಠ್ಠಲ ಎಂದು ನಾಮಕರಣ ಮಾಡಿದರು. ತಂದೆ–ತಾಯಿ ಕೂಲಿ ಕೆಲಸ ಮಾಡಿಕೊಂಡು ಕುಟುಂಬವನ್ನೇ ನಿರ್ವಹಿಸುವುದು ಕಷ್ಟಕಾಲದ ಸಂದರ್ಭದಲ್ಲಿ ತಾನಾಯಿತು ತನ್ನ ಪಾಡಾಯಿತು ಎಂದು ಏಕಾಂಗಿಯಾಗಿ ವೈಚಾರಿಕವಾದಿಯಾಗಿ ವಿವಿಧ ಪ್ರಶ್ನೆಗಳನ್ನು ಹಾಕುತ್ತ ಬೆಳೆಯುತ್ತಿದ್ದರು.

ಸಾಮಾನ್ಯವಾಗಿ ಎಲ್ಲಾ ಮಕ್ಕಳು ೫ನೇ ವರ್ಷದಲ್ಲಿ ಶಾಲೆಗೆ ಪ್ರವೇಶ ಪಡೆದರೆ, ವಿಠ್ಠಲ ೮ನೇ ವಯಸ್ಸಿಗೆ ೧ನೇ ತರಗತಿಗೆ ಪ್ರವೇಶವನ್ನು ಪಡೆದಿದ್ದಾನೆ. ಖಾಸಗಿ ಶಾಲೆಯಾಗಿದ್ದರಿಂದ ಸವರ್ಣೀಯರ ಉಪಟಳ ಹಾಗೂ ಜಾತೀಯತೆಯ ಆಚರಣೆಗೆ ಬೇಸತ್ತು ೩ನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಆದರೂ ಅಕ್ಷರದ ಜ್ಞಾನವು ಮಾತ್ರ ಮರೆಮಾಚಲಿಲ್ಲ. ಅವರಿವರಿಂದ ಹಿರಿ–ಕಿರಿಯರಿಂದ ಅಕ್ಷರ ಮತ್ತು ನೀತಿ ಬೋಧನೆಯ ವಿಚಾರಗಳನ್ನು ಕಲಿಯುತ್ತ ಬೆಳೆಯುತ್ತಿದ್ದರು.

ಹೀಗೆ ವೈಚಾರಿಕ ದೃಷ್ಟಿಕೋನದಿಂದ ಬೆಳೆಯುತ್ತಿದ್ದ ಮಗನನ್ನು ಕಂಡು ೧೫ನೇ ವಯಸ್ಸಿನಲ್ಲಿಯೇ ನಾಗಮ್ಮಳೊಂದಿಗೆ ಬಾಲ್ಯ ವಿವಾಹ ಮಾಡಿದರು. ಆದರೂ ಮನೆಯ ಜವಾಬ್ದಾರಿ ಮತ್ತು ಕುಟುಂಬದ ನಿರ್ವಹಣೆಯು ತನ್ನ ತಂದೆಯೇ ನಿರ್ವಹಿಸುತ್ತಿದ್ದರು. ಹಗಲೆಲ್ಲ ಅಲೆದಾಡಿ ಸಂಜೆಯಾದರೆ, ಭಕ್ತಿಗೀತೆ, ಭಜನೆ ಮತ್ತು ತತ್ವಪದಗಳಲ್ಲಿ ಭಾಗವಹಿಸುವುದು ಮಾತ್ರ ತಪ್ಪುತ್ತಿರಲಿಲ್ಲ. ಅಂದಿನ ತಂದೆಯ ಭಜನೆ ಮತ್ತು ಭಕ್ತಿಯೂ ಬೆಲ್ದಾಳ ಶರಣರಿಗೆ ಆಧ್ಯಾತ್ಮಕ್ಕೆ ಮೂಲ ಪ್ರೇರಣೆಯಾಯಿತು. ಏಕೆಂದರೆ ಭಜನಾ ಮತ್ತು ತತ್ವಪದಗಳಲಿ ಬರುವ ವೈಚಾರಿಕ ವಿಚಾರಗಳು,

ಜಾತಿಯ ಅನಾವರಣಗಳು ಮತ್ತು ಜೀವನದ ಮೌಲ್ಯಗಳು ಇವೆಲ್ಲವುಗಳು ವಚನಕಾರರ ಮೂಲ ಸ್ವರೂಪ ಸಿದ್ಧಾಂತವಾದಿಗೆ ವರವಾಗಿ ಪರಿಣಮಿಸಿತು.

ಬದುಕಿಗಾಗಿ ಹೊಲಿಗೆ ಕಾಯಕವನ್ನು ಆಯ್ಕೆ ಮಾಡಿಕೊಂಡರು. ಆಶ್ರಯದ ಜೊತೆಗೆ ಅನುಭವ, ಭಜನೆ, ಭಕ್ತಿ, ಸಾಧು-ಸಂತರು, ಮತ್ತು ಧಾರ್ಮಿಕ ಆರಾಧಕರೊಂದಿಗೆ ಪರಸ್ಪರ ಒಡನಾಟ ಮತ್ತು ಏಕತಾರಿಯ ತತ್ವಪದ ಅಂಶಗಳ ಅರಿವಿನ ಶಕ್ತಿಯನ್ನು ತನಗರಿವಿಲ್ಲದಂತೆ ತನ್ನೊಳಗೆ ಆವರಿಸಿತು. ಮುಂದೆ ೧೯ನೇ ವಯಸ್ಸಿನಲ್ಲಿ ಶಿವಯೋಗ ಸಾಧನೆಯಲ್ಲಿ ತತ್ಪರತೆಯ ವಿಶಿಷ್ಟ ಶಕ್ತಿಯಾಗಿ ರಾತ್ರಿ ೩ ಗಂಟೆಗೆ ಎದ್ದು ಸ್ನಾನ ಮಾಡಿ ಊರ ಹೊರಗಿನ ಗುಡ್ಡವೊಂದರಲ್ಲಿ ಶಿವಯೋಗ ಸಾಧನೆಗೈದರು. ಹೀಗೆ ಐದಾರು ವರ್ಷಗಳಲ್ಲಿ ಅಂತರಂಗದ ಶುದ್ಧಿಗಾಗಿ ಪರಮ ಶಾಂತಿ, ಸಂತೃಪ್ತಿ, ಸಂಪಾದನೆ, ಮತ್ತು ಅನುಭವವನ್ನು ಪಡೆದು ತನ್ನ ನಿಜ ಸ್ವರೂಪವನ್ನು ಅರಿಯುವ ಹಂಬಲದಲ್ಲಿ ನಿಜಗುಣ ಶಿವಯೋಗಿಗಳ ವೇದಾಂತ ಮತ್ತು ತತ್ವಜ್ಞಾನದಲ್ಲಿ ಒಲವು ಹರಿಸಿ, ಬಸವಾದಿ ಶರಣರ ತತ್ವದತ್ತ ಮುಖಮಾಡಿದರು. ಅದೆ ಉಸಿರು ಬಸವನೇ ಹಸಿರು ಎಂದು ಬಸವನೆ ತನ್ನ ದೈವ ಹಾಗೂ ಆಧ್ಯಾತ್ಮದ ಬದುಕಿನಲ್ಲಿ ನನಗೆ ಮಾರ್ಗದಾತ ಮುಕ್ತಿದಾತ ಬಸವ ನಿಷ್ಠೆಯ ಅಪ್ಪಟ ಭಕ್ತರಾದರು.

ಕೇವಲ ೨೪ ವಯಸ್ಸಿನಿಂದ ೨೯ ವಯಸ್ಸಿನವರೆಗೆ ಮಾತ್ರ ಲೌಕಿಕ ಸತಿ-ಪತಿ ಭಾವದ ಬದುಕು. ಅನಂತರ ಸತಿ-ಪತಿಗಳು ಭಾವ ಮೀರಿದ ಉಭಯರು ಶಿವಯೋಗ ಸುಖ ಸಂಪನ್ನತೆಯಲ್ಲಿ ಮುನ್ನಡೆ ಸಾಧಿಸುವುದರ ಜೊತೆಗೆ ಕುಟುಂಬದಲ್ಲಿ ಮಹಾದೇವಿ ಮತ್ತು ಶಿವಕುಮಾರ ಎಂಬ ಎರಡು ಸಂತಾನ ಪಡೆದರು. ಅವರಿಗೆ ಮಹಾಪುರುಷರ ಹೆಸರು ಇಡುವುದರ ಮೂಲ ಕುಟುಂಬದ ಹರ್ಷ ಮತ್ತು ಉಲ್ಲಾಸವು ಇಮ್ಮಡಿಗೊಳಿಸಿತು.

೧೯೭೪ ಜನವರಿ ೧೪ ರಂದು ಔರಾದ ನಗರದ ಅಮರೇಶ್ವರ ದೇವಾಲಯದಲ್ಲಿ ಜರುಗಿದ ಸಿದ್ಧರಾಮೇಶ್ವರ ಜಯಂತಿಯಲ್ಲಿ ಭಾಲ್ಕಿಯ ಪೂಜ್ಯ ಚೆನ್ನಬಸವ ಪಟ್ಟದೇವರು ಸಾನಿಧ್ಯ ವಹಿಸಿದರು. ಆಗ ಭಾಲ್ಕಿಯ ಪೂಜ್ಯರನ್ನು ನೋಡುವ ಹಂಬಲದಿಂದ ಪ್ರತ್ಯೇಕ್ಷನಾಗಿ ಹೋದ ಸಂದರ್ಭದಲ್ಲಿ ಕೆಲವರ ಒತ್ತಾಯದಿಂದ ಶಿವಯೋಗ ಕುರಿತು ವೇದಿಕೆಯ ಮೇಲೆ ೧೫ ನಿಮಿಷಗಳ ಕಾಲ ಮಾತನಾಡಿದರು. ಇದರಿಂದ ಪರಮಾನಂದ ಭರಿತರಾದ ಪಟ್ಟದೇವರು 'ತಟ್ಟನೇ ಎದ್ದು, ಅಪ್ಪಿಕೊಂಡು ಹೂಮಾಲೆ ಹಾಕಿ ಇಂದು ಸಿದ್ಧರಾಮ ಶಿವಯೋಗಿ ಜಯಂತಿ, ಇಂದು ಈ ರೂಪದಲ್ಲಿ ಸಿದ್ಧರಾಮ ಸಿಕ್ಕ' ಎಂದು ಮುಂತಾಗಿ ಹೃದಯ ತುಂಬಿ ಆಶೀರ್ವಚನ ನೀಡಿದರು. ಶ್ರೀ ಸಿದ್ದರಾಮ ಶಿವಯೋಗಿಗೆ ಜಯವಾಗಲಿವೆಂದು ಹಾರೈಸಿದರು. ಅಂದಿನಿಂದ 'ಸಿದ್ಧರಾಮ ಶರಣ'ರೆಂದು ಮತ್ತು ಬೆಲ್ದಾಳ ಶರಣರೆಂದು ಪ್ರಸಿದ್ಧಿಗೆ ಪಡೆದರು. ಆವಾಗಿನಿಂದ ಭಾಲ್ಕಿಯ ಪಟ್ಟದೇವರಿಗೆ ಸಮೀಪರಾಗಿ ಅವಿನಾಭಾವ ಸಂಬಂಧವನ್ನು ಇರಿಸಿಕೊಂಡರು. ಪೂಜ್ಯರ ಪೂರ್ಣಕೃಪೆಯಿಂದಾಗಿ ೨೮.೦೨.೧೯೭೫ರಂದು ಬಸವಕಲ್ಯಾಣ ಅನುಭವ ಮಂಟಪದಲ್ಲಿ ಪೂಜ್ಯ ಚೆನ್ನಬಸವ ಅಪ್ಪಗಳವರಿಂದ ಲಿಂಗ ದೀಕ್ಷೆ ಮತ್ತು ಜಂಗಮದೀಕ್ಷೆ ಪಡೆದರು.

ದೀಕ್ಷೆ ಪಡೆದ ವರ್ಷವೇ ೨೦ ಜನ ದಲಿತ ಬಡ ಅಸಹಾಯಕ ಮಕ್ಕಳನ್ನು ದತ್ತು ಪಡೆದು ಸಾಕಿ, ಸಲುಹಿ, ಊಟ, ವಸತಿ, ಬಟ್ಟೆ, ಪುಸ್ತಕ ಉಚಿತ ವಿದ್ಯಾಭ್ಯಾಸ ಮತ್ತು ಮಕ್ಕಳ ಪಾಲನೆ ಪೋಷಣೆಗೆ ತನ್ನ ಕಾಯಕ ಹಾಗೂ ಅಲ್ಪ ತಮ್ಮ ಭೂಮಿಯ ಆದಾಯವೇ ಆಶ್ರಯವಾಯಿತು. ೧೯೮೦ರಲ್ಲಿ ಅನೇಕರ ಒತ್ತಾಯದ ಮೇರೆಗೆ ಆಶ್ರಮ ಮತ್ತು ಮಕ್ಕಳನ್ನು ತೆಗೆದುಕೊಂಡು ಕೌಠಾ (ಬಿ) ಗ್ರಾಮದ ನದಿ ದಂಡೆಯ ಮೇಲೆ ಬಸವ ಯೋಗಾಶ್ರಮ ಸ್ಥಾಪಿಸಿ, ತಾವು ಒಂದು ಹುಲ್ಲಿನ ಗುಡಿಸಿಲಿನಲ್ಲಿ ವಾಸವಾಗುವುದಕ್ಕೆ ಶ್ರೀ ಚೆನ್ನಬಸವ ಪಟ್ಟದೇವರ ಕೃಪೆಯಿದೆ ಎನ್ನುವುದು ಇಲ್ಲಿ ಮರೆಯುವಂತಿಲ್ಲ. ಮತ್ತು ಶರಣತತ್ವ ಪ್ರಸಾರ ಸಂಸ್ಥೆಯ ಸ್ಥಾಪನೆ ಮಾಡಿದ್ದು ಇಲ್ಲಿ ಸ್ಮರಿಸಬೇಕು. ಮುಂದೆ ೧೯೮೧ರಲ್ಲಿ ಆಶ್ರಮ ಶಾಲೆಗೆ 'ಮಾದಾರ ಚೆನ್ನಯ ಪ್ರಸಾದ ನಿಲಯ' ಎಂದು ನಾಮಕರಣ ಮಾಡಿ ಸರ್ಕಾರವೂ ಗಮನ ಸೆಳೆಯುವಂತೆ ಮಾಡಿದ್ದು ಇಲ್ಲಿ ಸ್ತುತ್ಯಾರ್ಹವಾಗಿದೆ. ನಂತರ ೧೯೮೭ರಲ್ಲಿ ಹರಳಯ್ಯ ಪ್ರೌಢಶಾಲೆ ಪ್ರಾರಂಭಿಸಿದರು. ಅದು ಇಂದೂ 'ಹರಳಯ್ಯ ಸಂಯುಕ್ತ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯ'ವಾಗಿ ಸಾವಿರಾರು ಗ್ರಾಮೀಣ ಬಡ ಮಕ್ಕಳಿಗೆ ಇಂದಿಗೂ ದೊಡ್ಡ ವಿದ್ಯಾಕೇಂದ್ರವಾಗಿ ಮಾರ್ಪಟ್ಟಿದೆ.

ಹೀಗೆ ಸಾಧನೆಗೈದ ಮಹಾತಪಸ್ವಿ ಶ್ರೀ ಸಿದ್ಧರಾಮ ಬೆಲ್ದಾಳ ಶರಣರು ಕೆಲವು ಪರಿಷತ್ತು ಮತ್ತು ಕೇಂದ್ರಗಳನ್ನು ಸ್ಥಾಪಿಸಿದ್ದಾರೆ.

**ಪರಿಷತ್ತು ಮತ್ತು ಕೇಂದ್ರಗಳು**

೧. ಬಸವ ಮಹಾಮನೆ ಸ್ಥಾಪನೆ (ಬಸವ ಕಲ್ಯಾಣದಲ್ಲಿ)
೨. ಶಿವಯೋಗ ಪರಿಷತ್ತು ಮತ್ತು ಧ್ಯಾನಯೋಗ ಪರಿಷತ್ತು
೩. ಅನುಭವ ಮಂಟಪದ ಸಂಸ್ಥಾಪಕ ಸದಸ್ಯತ್ವ, ಮತ್ತು ಬಸವಕೇಂದ್ರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ.
೪. ೨೦೦೪ರಲ್ಲಿ ಶರಣ ಸಂಸತ್ತು ಸ್ಥಾಪನೆ ಇದು ಆರು ಅಧಿವೇಶನ ನಡೆಸಿವೆ.
೫. ಶರಣತತ್ವ ಪ್ರಸಾರ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ ಸ್ಥಾಪನೆ
೬. ಬಸವ ಶ್ರೀ ಆಸ್ಪತ್ರೆ ಕೌಠಾ (ಬಿ) ಮತ್ತು ಬಸವ ಶ್ರೀ ಆಸ್ಪತ್ರೆ ಬೆಲ್ದಾಳ ಗ್ರಾಮದಲ್ಲಿ ಉಚಿತವಾಗಿ ನಡೆಯಲು ಸ್ಥಾಪಿಸಿದ್ದಾರೆ. ಮುಂದೆ ಇದು ಬೃಹತ್ ಪ್ರಮಾಣದ ಆಸ್ಪತ್ರೆ ಯೋಜನೆಯಾಗಿದೆ. (ತಮಗೆ ಬಂದ ಬಸವಶ್ರೀ ಪ್ರಶಸ್ತಿಯ ಒಂದು ಲಕ್ಷ ರೂಪಾಯಿ ಹಣದಿಂದ ಆರಂಭಿಸಿದ್ದಾರೆ.)
೭. ಏಕತಾ ಪರಿಷತ್ತು ಸ್ಥಾಪನೆ.
೮. ಬಸವ ಮಹಾಮನೆ ಸಂಸ್ಥೆಯ ಆಶ್ರಯದಲ್ಲಿ ನೀಲಾಂಬಿಕಾ ಬಸವಯೋಗ ಕೇಂದ್ರ ಸ್ಥಾಪನೆ.

ಈ ರೀತಿಯಾಗಿ ಮುಂತಾದ ಕೇಂದ್ರಗಳು ಮತ್ತು ಪರಿಷತ್ತು ಸ್ಥಾಪನೆ ಮಾಡಿ ೧೯೮೦ರಿಂದ ನಾಡಿನಾದ್ಯಂತ ಬಸವಾದಿ ಶರಣರ ತತ್ವಧಾರಿತ, ಆಧ್ಯಾತ್ಮಿಕ ತಳಹದಿಯ ಮೆಲೆ ಸಮಾಜ ಸುಧಾರಣಾ ಪ್ರವಚನ ನೀಡಿದ್ದಾರೆ. ಅವುಗಳು ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ಹಾವೇರಿ, ಬೆಳಗಾವಿ, ಗದಗ, ಕಲಬುರಗಿ ಮುಂತಾದ ನಗರಗಳಲ್ಲದೆ, ದೇಶ ವಿದೇಶಗಳಲ್ಲಿಯೂ ಸಭೆ ಸಮ್ಮೇಳನಗಳನ್ನು ಉದ್ಘಾಟನೆ ಮಾಡಿ ಪ್ರವಚನವನ್ನು ನೀಡಿದ್ದಾರೆ. ಮತ್ತು ಜನರಲ್ಲಿ ಸಹಬಾಳ್ವೆ ಹಾಗೂ ಸಾಮರಸ್ಯದ ಬದುಕಿಗೆ ನಾಂದಿ ಹಾಡಿದ್ದಾರೆ.

ಇದಲ್ಲದೆ ಕಲ್ಯಾಣ ನಾಡಿನ ಶರಣ ಪರಿಷತ್ತಿನ ಅಧ್ಯಕ್ಷರಾಗಿ ಬೀದರ, ಜಹಿರಾಬಾದ, ದೆಹಲಿ, ಉದಗೀರ, ಸೇಡಂ ಮುಂತಾದ ನಗರಗಳಲ್ಲಿ ರಾಷ್ಟ್ರಮಟ್ಟದ ಮತ್ತು ರಾಜ್ಯಮಟ್ಟದ ಸಮ್ಮೇಳನ ನಡೆಸಿ ಜನರ ವಿಶ್ವಾಸ ಮತ್ತು ಸಹಕಾರವನ್ನು ಬೆಳೆಸಿಕೊಂಡಿದ್ದಾರೆ. ಈ ರೀತಿಯಾಗಿ ವೈಚಾರಿಕವಾದಿಯಾದ ಮತ್ತು ಬಸವ ತತ್ವದ ದಾಸನಾದ ಶ್ರೀ ಸಿದ್ಧರಾಮ ಬೆಲ್ದಾಳ ಶರಣರು ಈ ಕೆಳಗಿನ ಕೃತಿಗಳನ್ನು ರಚಿಸಿದ್ದಾರೆ.

**ಕೃತಿಗಳು-**

೧) ವಚನ ತತ್ವ ಸಾರ ೨) ಭಗವಾನ ಬುದ್ಧ, ೩) ಕರುಳ ಕಲೆ, ೪)ಇಷ್ಟಲಿಂಗಾರ್ಚನೆಯ ವಿಧಾನ, ೫)ಬಸವಣ್ಣನವರಿಂದಲೇ ಇಷ್ಟಲಿಂಗ, ೬) ಷಟಸ್ಥಲ ಸಂಪತು, ೭) ಶರಣರು ಬೆಳಗಿದ ಬೆಳಕು,

೮) ವಚನ ತತ್ವಾನುಭವ (ಬೃಹತ್ ಗ್ರಂಥ), ೯) ಬಸವ ತತ್ವ ಪ್ರದೀಪಿಕೆ ೧೦) ಶಿವಯೋಗ ಸುಖ, ೧೧) ನಿರ್ಮಿತಿ, ೧೨) ಚೆನ್ನಬಸವಣ್ಣನವರ ವಚನ-ವ್ಯಾಖ್ಯಾನ, ೧೩) ಶೂನ್ಯ ಸಂಪಾದನೆಯ ರಹಸ್ಯ–೧,೨,೩,೪ ಸಂಪುಟಗಳು, ೧೪) ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿಯ ತವನಿಧಿ.

ಹೀಗೆ ಇನ್ನು ಮುಂತಾದ ಕೃತಿಗಳು ರಚಿಸಿದ್ದಾರೆ. ವಚನಕಾರರ ವ್ಯಾಖ್ಯಾನಗಳ ಮೂಲಕ ಸಮಾಜದಲ್ಲಿನ ಅಂಧಶ್ರದ್ಧೆ, ಮೂಢನಂಬಿಕೆಗಳು ಹಾಗೂ ತತ್ವಾದರ್ಶಗಳ ಪರಸ್ಪರ ವೈಚಾರಿಕ ದೃಷ್ಟಿಕೋನದಿಂದ ನೋಡುವ ಇವರ ನಿಷ್ಠೆ ಅನನ್ಯವಾದದ್ದು. ಇವರ ಮನಸ್ಸು ಶುದ್ಧವಾದ ನಿರ್ಮಲತೆಯ ಬಳ್ಳಿಯಾಗಿ ಹೂವು ಬಿಡುವ ಪರಿಶುದ್ಧ ಸಹೃದಯವುಳ್ಳ ಮನಸ್ಕರಾಗಿದ್ದಾರೆ.

**ಶ್ರೀಯುತರಿಗೆ ಸಂದ ಗೌರವಗಳು ಹಾಗೂ ಪ್ರಶಸ್ತಿ ಪುರಸ್ಕಾರಗಳು–**

೧) ಕರ್ನಾಟಕದ ಮೊದಲ ಬಸವ ಶ್ರೀ ಪ್ರಶಸ್ತಿ, ೨) ಕುಮಾರ ಕಕ್ಕಯ್ಯ ಪೋಳ್ ಪ್ರಶಸ್ತಿ, ೩) ಕಂಬಲಿ ಬಾಬಾ ಪ್ರಶಸ್ತಿ ೪) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೫) ಬೀದರ ಮೊದಲ ಜಿಲ್ಲಾ ಪ್ರಶಸ್ತಿ, ೬) ಅನುಭವ ಮಂಟಪ ಪ್ರಶಸ್ತಿ, ೭) ಬಸವ ಸಾಧಕ ಪ್ರಶಸ್ತಿ, ೮) ಕಾಯಕ ಪ್ರಶಸ್ತಿ ೯)ಸುವರ್ಣ ಸಿರಿ ಪ್ರಶಸ್ತಿ ೧೦) ಕರ್ನಾಟಕ ರತ್ನ ಪ್ರಶಸ್ತಿ, ೧೧) ಹಳಕಟ್ಟಿ ಪ್ರಶಸ್ತಿ, ೧೨) ದೊಡ್ಡಪ್ಪ ಅಪ್ಪ ಪ್ರಶಸ್ತಿ, ೧೩) ಏಸುಕ್ರೈಸ್ತ ಪ್ರಶಸ್ತಿ, ೧೪) ರಮಣ ಮಾನ ಪ್ರಶಸ್ತಿ.

ಹೀಗೆ ಮುಂತಾದ ಪ್ರಶಸ್ತಿಗಳು ಲಭಸಿವೆ. ಆದರೂ ದಣಿವರಿಯದ ಸತ್ಯ ಮತ್ತು ನಿಷ್ಠೆಯ ಶರಣ ಸಂತ ಶ್ರೀ ಬೆಲ್ದಾಳ ಶರಣರ ಮನಸ್ಸು ಇನ್ನು ಸದಾ ಜಾಗೃತವಾಗಿದ್ದುಕೊಂಡು ಧರ್ಮಾಂಧತೆ, ಜನಾಂಗೀಯ ಭೇದಗಳು, ಸಂಘರ್ಷಗಳು, ಕೋಮು ಗಲಭೆಗಳು ಹಾಗೂ ಭಯೋತ್ಪಾದನಾ ನಿರ್ಮೂಲನೆಗಾಗಿ ಜಾಗೃತಿಯ ಅಭಿಯಾನವು ಮತ್ತು ಮಾನವನ ಏಕತೆಯ ಉಪದೇಶಗಳು ಸಾರುತ್ತಾ ಸದಾ ಕ್ರೀಯಾಶೀಲರಾಗಿ ವೈಚಾರಿಕ ದೃಷ್ಟಿಕೋನ ಪರಿಪಾಲಿಸುತ್ತ ಮುನ್ನಡೆಯುತ್ತಿದ್ದಾರೆ.

ದಿ//ಡಾ.ಎ.ಪಿ.ಜೆ ಅಬ್ದುಲ್ ಕಲಾಮ್ (ಮಾಜಿ ರಾಷ್ಟ್ರಪತಿಗಳು)ರವರಿಗೆ 'ಬಸವ ಪುರಸ್ಕಾರ' ನೀಡಿ ಈ ಪ್ರಶಸ್ತಿಯ ಮೌಲ್ಯವನ್ನು ಹೆಚ್ಚಿಸುವಲ್ಲಿ ಹಾಗೂ ಈ ಪ್ರಶಸ್ತಿಯೂ ರಾಷ್ಟ್ರ ಮಟ್ಟಕ್ಕೆ ಕೊಂಡೋಯ್ಯುವಲ್ಲಿ ಪ್ರಾಮಾಣಿಕ ವ್ಯಕ್ತಿಯಾಗಿ ಮತ್ತು ನಿರ್ಮಲ ಮನಸ್ಸಿನ ಶಕ್ತಿಯಾಗಿ ನಿಂತಿದ್ದಾರೆ.

ಹೀಗೆ ಒಟ್ಟಾರೆಯಾಗಿ ಜಾತಿ, ಧರ್ಮ, ಮುಂತಾದ ಪ್ರತ್ಯೇಕತೆಗೆ ಸಿಲುಕದೇ ಬಸವಾದಿ ಶರಣರ ವಿಶ್ವಮಾನ್ಯ ಜಾಗತೀಕ ಮೌಲ್ಯಗಳನ್ನು ತಿಳಿಸುತ್ತ ಸಾರ್ವತ್ರಿಕವಾಗಿ ಮಾನವನ ಏಕತೆಗಾಗಿ ಇಂದಿಗೂ ಪ್ರಯತ್ನ ನಡೆದಿದೆ. ಇಂದಿನ ಈ ಭಯೋತ್ಪಾದನೆ ಮತ್ತು ಕೋಮುಗಲಭೆಗಳ ಸಂದರ್ಭದಲ್ಲಿ ಇಂತಹ ವೈಚಾರಿಕ ನಿಲುವುಗಳು ಹಾಗೂ ತತ್ವಾದರ್ಶಗಳ ಮೌಲ್ಯಗಳು ಅತ್ಯವಶ್ಯಕವಾಗಿವೆ.

'ನನಗೆ ಯಾವ ಜಾತಿ ಧರ್ಮಗಳಿಲ್ಲ, ವಿಶ್ವ ಕುಟುಂಬಿ ಬಸವಾದಿ ಶರಣರ ಖಾಸಾ ವಾರಸುದಾರನೆಂಬ ನಿಲುವುಳ್ಳ' ವ್ಯಕ್ತಿಯಾಗಿದ್ದಾರೆ. ಇವರು ವಿಶ್ವದ ಶಾಂತಿದೂತ ತಥಾಗತ ಗೌತಮಬುದ್ಧ, ಭಕ್ತಿ ಭಂಡಾರಿ ಬಸವಣ್ಣ ಮತ್ತು ಸಮಾನತೆಯ ಶಿಲ್ಪಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಮುಂತಾದವರ ಆದರ್ಶಗಳಲ್ಲಿನ ಮಾನವೀಯ ನೆಲೆಯ ಬದುಕಿಗೆ ಒಗ್ಗಿಕೊಂಡವರಾಗಿದ್ದಾರೆ. ಶೋಷಣೆ ರಹಿತ ತತ್ವಗಳಲ್ಲಿ ಏಕತೆಯ ನಿಲುವು ಇಟ್ಟವರು, ಹಿಂದೂ ಮುಸ್ಲಿಂರು, ದಲಿತರು, ಸವರ್ಣಿಯರು ಹಾಗೂ ಬುದ್ಧಿಜೀವಿಗಳೆಲ್ಲರೂ ಶ್ರೀ ಬೆಲ್ದಾಳ ಶರಣರಿಗೆ ನಮಿಸಲೇಬೇಕು.